ಆಂಗ್ಲ ಭಾಷೆಯಲ್ಲಿ ಉತ್ತರ ಕಳುಹಿಸುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಾವೊಂದು ನಿರ್ಣಯ ಮಾಡಿ. ನಾವು ಇಲ್ಲಿ ದಿನೇ ದಿನೇ ಹೇಳಿ ಹೇಳಿ ಸಾಕಾಗಿ ಹೋಗಿದೆ. ಮಾನ್ಯ ದೇಶಪಾಂಡೆಯವರು ಅಪ್ಪಟ ಕನ್ನಡಿಗರಾಗಿದ್ದಾರೆ. ಆದರೆ ಅವರ ಇಲಾಖೆಯಿಂದ ಬರುವ ಉತ್ತರಗಳು ಇಂಗ್ಲೀಷ್‌ನಲ್ಲಿ ಇವೆ. ಸದನವನ್ನು ಇಂಗ್ಲೀಷ್‌ನಲ್ಲೇ ನಡೆಸುತ್ತೇವೆ. ಎಂದಾದರೂ ತಾವು ಹೇಳಿಬಿಡಿ. ಆ ಬಗ್ಗೆ ನಾವು ಅಸೆಂಬ್ಲಿಯಲ್ಲಿ ನಿರ್ಣಯವೊಂದನ್ನೇ ಮಾಡಿಬಿಡೋಣ. ನನ್ನ ಬಳಿ ಇರುವ ಪ್ರಶ್ನೆಯೊಂದರ ಉತ್ತರ ಬರೀ ಇಂಗ್ಲೀಷಿನಲ್ಲಿದೆ. ಇಂಗ್ಲೀಷ್‌ನಲ್ಲಿ ಇರುವುದನ್ನು ಓದಲಿಕ್ಕೆ ನಮಗೆ ಬರುವುದಿಲ್ಲ. ಅದಕ್ಕೇ ನಾವು ಈ ಮಾತನ್ನು ಹೇಳುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ :- ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಇದೆ.

ಅಧ್ಯಕ್ಷರು :- ಮೊದಲು ಕನ್ನಡ ಇದೆ. ಆ ನಂತರ ಇಂಗ್ಲೀಷ್ ಇದೆ. ಕೆಲವು ಡೀಟೆಲ್ಸ್ ಬರೀ ಇಂಗ್ಲಿಷ್‌ನಲ್ಲಿ ಇವೆ. ನಮ್ಮ ಸ್ಟಾಫ್‌ಗೆ ಹೇಳುತ್ತೇನೆ, ಬರೀ ಇಂಗ್ಲಿಷ್‌ನಲ್ಲಿ ಏನಾದರೂ ಇದ್ದರೆ ನೀವು ಇದನ್ನು ತೆಗೆದುಕೊಳ್ಳಬೇಡಿ. ಇಂಗ್ಲಿಷ್ ಕನ್ನಡ ಇದ್ದರೆ ಮಾತ್ರ ತೆಗೆದುಕೊಳ್ಳಿ. ಬರೀ ಇಂಗ್ಲಿಷ್‌ನಲ್ಲಿ ಇದ್ದರೆ ತೆಗೆದುಕೊಳ್ಳಬೇಡಿ.

ಶ್ರೀ ಡಿ.ವಿ. ಸದಾನಂದಗೌಡ :- ಬರೀ ಇಂಗ್ಲಿಷ್‌ನಲ್ಲಿ ಯಾರು ಕೊಟ್ಟಿದ್ದಾರೆ ಅಂತಹವರಿಗೆ ತಕ್ಷಣ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು :- ಅದು ಮುಂದಿನ ಹೆಜ್ಜೆ

ಪುತ್ತೂರು ತಾಲ್ಲೂಕಿನಲ್ಲಿ ಪಶುವೈದ್ಯ ಕಾಲೇಜು ಸ್ಥಾಪನೇ

145 (1280) ಶ್ರೀ ಡಿ.ವಿ. ಸದಾನಂದಗೌಡ ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಪಶುವೈದ್ಯ ಕಾಲೇಜುಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು) ?

ಆ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ; ಕರ್ತವ್ಯ ನಿರ್ವಹಿಸುತ್ತಿರುವ ಪಶುವೈದ್ಯರುಗಳ ಸಂಖ್ಯೆ ಎಷ್ಟು ; ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ವೈದ್ಯರುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹೊಸ ಕಾಲೇಜುಗಳನ್ನು ಸ್ಥಾಪಿಸುವ ಇರಾದೆ ಸರ್ಕಾರದ ಮುಂದಿದೆಯೇ ?

ಈ) ಇದ್ದಲ್ಲಿ, ಪುತ್ತೂರು ತಾಲ್ಲೂಕಿನ ಕ್ಯೊಲಾ ಜಾನುವಾರು ಕೇಂದ್ರದಲ್ಲಿ ಕಾಲೇಜು ಸ್ಥಾಪನೆಗೆ ಬೇಕಾದ ಮೂಲಭೂತ ಸೌಕರ್ಯಗಳೇನು ?

ಉ) ಇಲ್ಲಿ ಕಾಲೇಜು ಸ್ಥಾಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಎರಡು ಪಶುವೈದ್ಯ ಕಾಲೇಜುಗಳು ಇವೆ. ಇವು ಬೆಂಗಳೂರು ಮತ್ತು ಬೀದರ್‌ನಲ್ಲಿವೆ.

ಆ) - 1997ರ ಜಾನುವಾರುಗಳ ಗಣತಿ ಪ್ರಕಾರ 306.88 ಲಕ್ಷ ಜಾನುವಾರುಗಳು ಮತ್ತು 213.99 ಲಕ್ಷ ಕುಕ್ಕುಟಗಳು ಇವೆ.

- 406 ಸಹಾಯಕ ನಿರ್ದೇಶಕರುಗಳು ಮತ್ತು 897 ಪಶುವೈದ್ಯಾಧಿಕಾರಿಗಳು ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

- ಬಂದಿದೆ.

- ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸು ಪ್ರಕಾರ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯರು ಒಳಗೊಂಡ ಸಂಸ್ಥೆ ಇರಬೇಕು. (ಒಂದು ಜಾನುವಾರು ಘಟಕ ಎಂದರೆ ಒಂದು ಹಸು / ಎಮ್ಮೆ, 10 ಕುರಿ / ಮೇಕೆ, 5 ಹಂದಿ, 100 ಕೋಳಿ). ರಾಜ್ಯದಲ್ಲಿ 1546 ಪಶುವೈದ್ಯರನ್ನು ಒಳಗೊಂಡ ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿವೆ. ಆದರೆ ಜಾನುವಾರು ಸಂಖ್ಯೆಗೆ ಅನುಗುಣವಾಗಿ ಇನ್ನೂ 1819 ಪಶುವೈದ್ಯರ ಒಳಗೊಂಡ ಸಂಸ್ಥೆಗಳು ಬೇಕಾಗಿವೆ.

ಇ) ಸಧ್ಯಕ್ಕೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಉ) ಅನ್ವಯಿಸುವುದಿಲ್ಲ

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ. ಕನಿಷ್ಟ ಈಗಲಾದರೂ ಈ ಸರ್ಕಾರಕ್ಕೆ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ವೈದ್ಯರು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಕ್ಕೆ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಪ್ರಾಯಶಃ ಈ ಸರ್ಕಾರಕ್ಕೆ ಯಾರಿಗೂ ಉದ್ಯೋಗ ಕೊಡುವುದಕ್ಕಾಗುತ್ತಿಲ್ಲ. ಸ್ವ ಉದ್ಯೋಗದಿಂದ ಅದರೂ ಸ್ವಾಭಿಮಾನದಿಂದ ಬದುಕೋಣವೆಂದರೆ, ಅದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಈ ದೇಶ ಕೃಷಿ ಪ್ರಧಾನವಾದ ದೇಶ. ಗ್ರಾಮ ಸ್ವರಾಜ್ಯದ ಆಧಾರದಲ್ಲಿ ನಾವು ಬದುಕಬೇಕೆಂಬ ಕಲ್ಪನೆ ಇರುವಂಥದ್ದು. ಈ ದೇಶ ಏನಾದರೂ ಜಪಾನ್, ಕೊರಿಯಾ, ಜರ್ಮಿನಿಯೋ, ರಷ್ಯಾ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕನಿಷ್ಟ ಪಶು ಸಂಗೋಪನೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಏಕೆ ತಾವು ಹಿಂದೆ ಮುಂದೆ ನೋಡುತ್ತಿದ್ದೀರಿ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಪ್ರಕಾರ ಪ್ರತಿ 500 ಜಾನುವಾರು ಘಟಕಗಳಿಗೆ ಒಬ್ಬ ಪಶು ವೈದ್ಯರನ್ನೊಳಗೊಂಡ ಸಂಸ್ಥೆ ಇರಬೇಕೆಂದು ತಮಗೆ ಗೊತ್ತಿದೆ. 1997ರ ಜಾನುವಾರು ಜನಗಣತಿ ಪ್ರಕಾರ 306.88 ಲಕ್ಷ ಜಾನುವಾರುಗಳು 213.99 ಲಕ್ಷ ಕುಕ್ಕುಟಗಳಿವೆ ಎಂದು ಹೇಳಿದ್ದೀರಿ. ಒಟ್ಟಿಗೆ ನಿಮ್ಮಲ್ಲಿ 406 ಸಹಾಯಕ ನಿರ್ದೇಶಕರು, 897 ಪಶು ವೈದ್ಯಾಧಿಕಾರಿಗಳಿದ್ದಾರೆ. ಎಷ್ಟು ಪ್ರಪೋರ್ಷನೇಟ್ ಎಷ್ಟು ಪರ್ಸೆಂಟೇಜ್ ಬರುತ್ತದೆ ? ಜಾನುವಾರುಗಳಿಗೆ ಇರುವ ವೈದ್ಯರ ಸಂಖ್ಯೆ ಎಷ್ಟು, ಪರ್ಸೆಂಟೇಜ್ ಇದೆ ? ಎಷ್ಟು ವೈದ್ಯರುಗಳು ಜಾನುವಾರುಗಳಿಗೆ ಪ್ರಪೋರ್ಷನೇಟ್ ಆಗಿದ್ದಾರೆಂಬುದನ್ನು ತಾವು ಹೇಳಬೇಕು. ನಾನು ಕೇಳುವುದು ತಕ್ಷಣ ತಾವು ಇದಕ್ಕೆ ಬೇಕಾದ ನೇಮಕಾತಿ ಪ್ರಕ್ರಿಯೆಗಳನ್ನು ಮಾಡುತ್ತೀರಾ ? ನೇಮಕಾತಿ ಪ್ರಕ್ರಿಯೆ ಮಾಡಬೇಕಾದರೆ, ನಿಮಗೆ ಈ ಪಶು ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿರಬೇಕು. ಹೆಚ್ಚು ಜನ ಅಲ್ಲಿಂದ ಹೊರಗಡೆ ಬರಬೇಕು. ಅಂಥದ್ದು ಏನಾದರೂ ಹೊಸ ಕಾಲೇಜ್ ಸ್ಥಾಪಿಸುವ ಇರಾದೆ ಸರ್ಕಾರಕ್ಕೆ ಇದೆಯೇ ಎಂದು ಕೇಳಿದರೆ ಇಲ್ಲವೆಂದು ಹೇಳುತ್ತೀರಿ. ಹಾಗಾದರೆ ಎಲ್ಲಿಂದ ತಯಾರು ಮಾಡುತ್ತೀರಿ ? ಯಾವುದಾದರೂ ಫ್ಯಾಕ್ಟರಿಯಿಂದ ತಯಾರು ಮಾಡುತ್ತೀರಾ ? ನಿಮಗೆ ಏನಾದರೂ ಈ ಜನ ಬದುಕಬೇಕೆಂದು ಇದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗೆ ಬೇಕಾದ ಬೆಲೆ ಕುಸಿತದಿಂದ ಜನ ಕಂಗಾಲಾಗಿದ್ದಾರೆ. ಏನಾದರೂ ಎರಡು ಹಸು ಕಟ್ಟಿಕೊಂಡು ಜನ ಬದುಕಲಿ ಎಂದರೆ, ಅದಕ್ಕೆ ಆರೋಗ್ಯ ನೋಡಲಿಕ್ಕೆ ಬೇಕಾದ ಮೂಲಭೂತ ವ್ಯವಸ್ಥೆಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಯಾವಾಗ ಏನು ಮಾಡುತ್ತೀರಿ ? ಸರ್ಕಾರ ಕೈಗೊಂಡಿರುವ ಕ್ರಮಗಳೇನು ? ಇನ್ನು ಮುಂದೆ ಇದಕ್ಕೆ ಏನು

ಮಾಡುತ್ತಿದ್ದಾರೆಂದು ಹೇಳಬೇಕು. ಇಂಜಿನಿಯರಿಂಗ್ ಕಾಲೇಜ್, ಮತ್ತು ಮೆಡಿಕಲ್ ಕಾಲೇಜುಗಳನ್ನು ಬಹಳ ಹರಿಬಿರಿಯಿಂದ ತೆಗೆಯುತ್ತೀರಿ. ಏಕೆ ಪಶುವೈದ್ಯಕೀಯ ಕಾಲೇಜ್ ತೆಗೆಯಬಾರದು ? ಇಂಜಿನಿಯರಿಂಗ್ ಕಾಲೇಜಿಗೆ ಓಡೋಡಿ ಹೋಗಿ ಎಷ್ಟು ಅನುಮತಿ ಕೊಟ್ಟಿದ್ದೀರಿ, ಪಶು ವೈದ್ಯಕೀಯ ಕಾಲೇಜಿಗೆ ಅನುಮತಿ ಕೊಡುವುದಕ್ಕೆ ಏಕೆ ನಿರಾಕರಣೆ ಮಾಡುತ್ತೀರಿ ? ದಯವಿಟ್ಟು ಹೇಳಿ.

ಶ್ರೀ ಎಂ. ಮಹದೇವ್ :- ಮಾನ್ಯ ಅಧ್ಯಕ್ಷರೆ, ಪ್ರಸ್ತುತ ರಾಜ್ಯದಲ್ಲಿ ಪಶುವೈದ್ಯರನ್ನು ಒಳಗೊಂಡ 1546 ಪಶುವೈದ್ಯಕೀಯ ಸಂಸ್ಥೆಗಳು ಇವೆ. ಇನ್ನು 1819 ಪಶುವೈದ್ಯರನ್ನು ಒಳಗೊಂಡ ಸಂಸ್ಥೆಗಳು ಬೇಕಾಗಿವೆ. ಈ ಕೊರತೆಯನ್ನು ಪ್ರಸ್ತುತ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಹಾಗೂ ಗರ್ಭಧಾರಣಾ ಕೇಂದ್ರಗಳನ್ನು ಹಂತ ಹಂತವಾಗಿ ಮೇಲ್ದರ್ಜೆಗೇರಿಸುವ ಮೂಲಕ ನಿವಾರಿಸಲಾಗುವುದು. ಹಾಲಿ ಹುದ್ದೆಗಳ ಮಾಹಿತಿ ಎಷ್ಟು ಇದೆ ಎಂದು ಮಾಹಿತಿ ಕೊಡುತ್ತೇನೆ. ಮಂಜೂರಾದ ಹುದ್ದೆಗಳು ಸಹಾಯಕ ನಿರ್ದೇಶಕರು 474, ಪಶುವೈದ್ಯರು 1675, ಹಾಲಿ ಕೆಲಸ ನಿರ್ವಹಿಸುತ್ತಿರುವವರು ಸಹಾಯಕ ನಿರ್ದೇಶಕರು 406, ಪಶುವೈದ್ಯರು 897 ಇವೆ. ಕಾಲಿ ಹುದ್ದೆಗಳು ಸಹಾಯಕ ನಿರ್ದೇಶಕರು 68 ಇವೆ, ಪಶು ವೈದ್ಯರು 778 ಖಾಲಿ ಹುದ್ದೆಗಳಲ್ಲಿ ಗುತ್ತಿಗೆ ನೇಮಕಾತಿಗಳು ಪಶುವೈದ್ಯರು 210, ನಿವ್ವಳ ಹಾಲಿ ಕಾಲಿ ಹುದ್ದೆಗಳು 68 ಸಹಾಯಕ ನಿರ್ದೇಶಕರು, 578 ಪಶುವೈದ್ಯರು ಇದ್ದಾರೆ. ಈ ಪೈಕಿ ಮೊದಲ ಹಂತದಲ್ಲಿ ಪಶುವೈಧ್ಯಾಧಿಕಾರಿಗಳ 250 ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಅನುಮೋದನೆ ನೀಡಿದ್ದು ಸದರಿ ಹುದ್ದೆಗಳನ್ನು ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ಸಧ್ಯದಲ್ಲೇ ನೇಮಕ ಮಾಡಲಾಗುವುದು. ಪ್ರಸ್ತುತ ಯಾವುದೇ ಹೊಸ ಪಶುವೈದ್ಯಕೀಯ ಕಾಲೇಜ್ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೆ, ಅಗ್ರಿಕಲ್ಚರ್ ಯೂನಿರ್ವಸಿಟಿ ಇದೆ. ಇಲ್ಲಿ ಹೊಸ ಹೊಸ ರೋಗಗಳಿಗೆ ಸಂಶೋಧನೆಯಾಗಲಿ ಇನ್ನೊಂದಾಗಲಿ ವಿಶೇಷವಾದ ಗಮನಕ ಅಲ್ಲಿ ಬರುತ್ತಿಲ್ಲ. ಹಾಗಾಗಿ ಹೊಸ ವೆಟರ್ನರಿ ಯೂನಿವರ್ಸಿಟಿಯನ್ನು ತೆರೆಯುತ್ತಾರೆಂದು ಹೇಳಿ ಹಿಂದೆ ಒಂದು ಸಾರಿ ಸರ್ಕಾರ ಈ ಸದನದಲ್ಲಿ ಹೇಳಿರತಕ್ಕಂಥದ್ದು ಇದೆ. ಮಾನ್ಯ ಮಂತ್ರಿಗಳಿಗೆ ನಾನು ಕೇಳುತ್ತೇನೆ, ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿರತಕ್ಕಂತಹ ವೆಟರ್ನರಿಯನ್ನು ಪ್ರತ್ಯೇಕ ಮಾಡಿ ಪಶು ಸಂಗೋಪನಾ ವಿಶ್ವವಿದ್ಯಾನಿಲಯವನ್ನು ತೆರೆಯುವುದರ ಬಗ್ಗೆ ಸರ್ಕಾರ ಹಿಂದೆ ಚಿಂತನೆ ನಡೆಸಿತ್ತು. ಅದನ್ನು ಏನಾದರೂ ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಇದೆಯಾ ? ಅನೇಕ ಸಂಶೋಧನಾ ಕಾಲೇಜುಗಳನ್ನು ತೆರೆಯುವ ಬಗ್ಗೆ ವಿಶೇಷವಾಗಿ ಗ್ರಾಮೀಣ ಜನರಿಗೆ ಇದನ್ನು ನೆರವು ನೀಡುವ ಸಂಗತಿ ಬಗ್ಗೆ ಪಶು ಸಂಗೋಪನಾ ಇಲಾಖೆ ಅವಗಣನೆಗೆ ಒಳಗಾಗಿದೆ. ಈ ದೃಷ್ಟಿಯಿಂದ ಏನಾದರೂ ಹೊಸ ಯೂನಿವರ್ಸಿಟಿ ತೆಗೆಯುವ ಬಗ್ಗೆ ಚಿಂತನೆ ಮಾಡಿದೆಯಾ ?

ಶ್ರೀ ಎಸ್. ಅಂಗಾರ :- ಮಾನ್ಯ ಅಧ್ಯಕ್ಷರೆ, ಕೊಯ್ಲಾ ಜಾನುವಾರು ಸಂವರ್ಧನ ಕೇಂದ್ರ ಏನಿದೆ, ಅದು ನನ್ನ ಸೂಳ್ಯ ವಿಧಾನಸಭಾ ಕ್ಷೇತ್ರಕ್ಕೆ ಬರುತ್ತದೆ. ಸನ್ಮಾನ್ಯ ಡಿ.ವಿ. ಸದಾನಂದ ಗೌಡರು ಒಂದು ಪ್ರಶ್ನೆ ಕೇಳಿದರು. ಈ ಹೊಸ ಕಾಲೇಜ್ ಸ್ಥಾಪಿಸುವ ಇರಾದೆ ಸರ್ಕಾರಕ್ಕೆ ಇದೆಯಾ ? ಸನ್ಮಾನ್ಯ ಸಮಾಜ ಕಲ್ಯಾಣ ಸಚಿವರು ಕೊಯ್ಲಾ ಜಾನುವಾರು ಸಂವರ್ಧನ ಕೇಂದ್ರಕ್ಕೆ ಭೇಟಿ ನೀಡಿದರು. ಸುಮಾರು 763 ಎಕರೆ ಜಾಗ ಇದೆ. ಎಲ್ಲಾ ಮೂಲ ಭೂತ ಅವಶ್ಯಕತೆಗಳು

ಕೂಡ ಇಲ್ಲಿ ಇವೆ. ಒಂದು ಈಗಾಗಲೇ ಸೂಳ್ಯದಲ್ಲಿ ಅಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಉಡುಪಿ ಜಿಲ್ಲೆ ಇರಬಹುದು, ಇಲ್ಲಿ ಹೈನುಗಾರಿಕೆಗೆ ಹೆಚ್ಚು ಒತ್ತು ಕೊಡುತ್ತಿದ್ದೇವೆ. ಅಡಿಕೆ ಬೆಳೆ ಸಮಸ್ಯೆ ಇರಬಹುದು, ಬೀಡಿ ಕಾರ್ಮಿಕರ ಸಮಸ್ಯೆ ಇರಬಹುದು, ಈ ರೀತಿಯ ಸಮಸ್ಯೆ ಬರುವುದು ಉಂಟು. ಈ ರೀತಿಯ ಸಮಸ್ಯೆಗಳು ಬರುವ ಮುಂಚಿತವಾಗಿ ಪಶುವೈದ್ಯಕೀಯ ಕಾಲೇಜುಗಳ ಸ್ಥಾಪನೆ ಮಾಡಿ ಯಾವ ಯಾವ ರೀತಿ ಸಂಶೋಧನೆ ಮಾಡಿ, ಯಾವ ಯಾವ ರೀತಿ ಉತ್ಪಾದನೆಯನ್ನು ಮಾಡಬಹುದು, ಹೇಗೆ ಬೆಳೆಸಬಹುದು ಎಂಬ ದೃಷ್ಟಿಯಿಂದ ಕಾಲೇಜನ್ನು ಪ್ರಾರಂಭ ಮಾಡಿದರೆ ತುಂಬಾ ಕಷ್ಟವಾಗಬಹುದು. ಅದಕ್ಕಾಗಿ ಕೊಯ್ಲಾ ಜಾನುವಾರು ಕೇಂದ್ರದಲ್ಲಿ ಎಲ್ಲ ಮೂಲಭೂತ ಸೌಲಭ್ಯಗಳು ಇವೆ. ಅಂತಹ ಜಾಗದಲ್ಲಿ ಪಶು ಕಾಲೇಜು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯಾ ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಮತ್ತು ಇದರ ಮೇಲೆ ಕ್ರಮ ಕೈಗೊಳ್ಳಬೇಕು.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ :- ಮಾನ್ಯ ಅಧ್ಯಕ್ಷರೆ, ಮಾನ್ಯ ಪಶುಸಂಗೋಪನಾ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಪಶುವೈದ್ಯರು ಬಹಳಷ್ಟು ಜನ ಇದ್ದಾರೆ. 12 ಜನ ವೈದ್ಯಾಧಿಕಾರಿಗಳು ಇದ್ದಾರೆ. ಪಕ್ಕದ ತಾಲ್ಲೂಕು ಕುಂದಗೋಳು ಇರಬಹುದು, ಕಲಘಟಗಿ ಇರಬಹುದು, ರಾಜಯ್ಯನ ಮಠದಲ್ಲಿ ಇವತ್ತು ವೈದ್ಯಾಧಿಕಾರಿಗಳ ಕೊರತೆ ಬಹಳ ಇದೆ. ನನ್ನ ಕ್ಷೇತ್ರವಾದ ಕಲಘಟಗಿ ತಾಲ್ಲೂಕು ಹುಬ್ಬಳ್ಳಿಯಿಂದ 32 ಕಿಲೋ ಮಿಟರ್ ದೂರ ಇರುವ ತಾಲ್ಲೂಕು. ಅಲ್ಲಿಂದ ಎಂಟು ಕಿಲೋ ಮೀಟರ್ ಇರುವ ಬೇಲಿಕೊಪ್ಪ ಗ್ರಾಮದಲ್ಲಿ ಎರಡು ಎತ್ತುಗಳು ತೀರಿಕೊಂಡವು. 32,000 ರೂಪಾಯಿ ಕೊಟ್ಟು ಕೊಂಡ 15 ದಿವಸದಲ್ಲಿ ಆ ಎತ್ತುಗಳು ತೀರಿಕೊಂಡವು. ಅಲ್ಲಿ ಡಾಕ್ಟರ್ ಇಲ್ಲ. ಡಾಕ್ಟರ್‌ಗಳು ಧಾರವಾಡದಲ್ಲಿ ವಾಸ ಮಾಡುತ್ತಿರುತ್ತಾರೆ. ವಾರದಲ್ಲಿ ಒಂದು ಸಾರಿ ಅವರು ಕಲಘಟಗಿಗೆ ಬರುತ್ತಾರೆ. ಅಲ್ಲಿಗೆ ಹೋದರೆ ಡಾಕ್ಟರ್ ಮಾಡುವ ಕೆಲಸ ಕಾಂಪೌಂಡರ್ ಮಾಡುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಇವತ್ತು ಯಾವುದೇ ದನಕರುಗಳನ್ನು ಅಲ್ಲಿಗೆ ಒಯ್ಯುವ ಹಾಗಿಲ್ಲ. ಏಕೆಂದರೆ, ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಆಗುತ್ತದೆ. ಆ ಹೆದ್ದಾರಿಯಲ್ಲಿ ಬಸ್‌ಗಳು ಟ್ರಕ್‌ಗಳು ಓಡಾಡುವುದರಿಂದ ದನಕರುಗಳು ಗದ್ದಲದಿಂದ ಬೆದರಿ ಅನಾಹುತಗಳಾಗುತ್ತವೆ ಎಂಬ ಕಾರಣದಿಂದ ಕುಂದಗೋಳು ಮತ್ತು ಕಲಘಟಗಿಗೆ ದನಗಳನ್ನು ತೋರಿಸುವುದಕ್ಕೆ ಹೋಗುವ ವ್ಯವಸ್ಥೆ ಇಲ್ಲಿ ಇದೆ. ಅಲ್ಲಿರುವಂತಹ ಡಾಕ್ಟರ್‌ಗಳ ಸಂಖ್ಯೆ ಎಷ್ಟು ಎಂದು ಸವಿಸ್ತಾರವಾಗಿ ತಮ್ಮ ಇಲಾಖೆಯ ಮುಖಾಂತರ ತಿಳಿದುಕೊಂಡು ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ. ಗ್ರಾಮೀಣ ಮಟ್ಟದಲ್ಲಿ ನಮ್ಮ ಕಲಘಟಗಿ ತಾಲ್ಲೂಕಿಗೆ ಒಬ್ಬ ವೈದ್ಯರಿಗೆ ನೇಮಕ ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

12.30 ಪಿ.ಎಂ.

ಶ್ರೀ ಸಿ. ಚೆನ್ನಿಗಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪಶು ವೈದ್ಯ ಆಸ್ಪತ್ರೆಗಳ ಕೊರತೆ ನೀಗುವುದಲ್ಲದೆ ಪಶು ವೈದ್ಯರುಗಳ ನೇಮಕಾತಿಯನ್ನು ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ನೀಡಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ರೈತರು ತಮ್ಮ ಪಶುಗಳಿಗಾಗಿ ವೈದ್ಯರ ಬಳಿ ಟ್ರೀಟ್‌ಮೆಂಟ್‌ಗೆ ಹೋದರೆ, ಅವರು ದುಬಾರಿ ಬೆಲೆಯ ಔಷಧಿಗಳನ್ನು ಬರೆದು ಕೊಡುತ್ತಾರೆ. ಅದು 500-700-800 ಬೆಲೆ. ಹಾಲಿನ ರೇಟ್ ಮಾತ್ರ ಲೀಟರ್‌ಗೆ 8.50 ರೂಪಾಯಿ

ಇದೆ. ದುಬಾರಿ ಬೆಲೆಯ ಔಷಧಿಯ ಚೀಟಿ ಬರೆದು ಕೊಟ್ಟ ತಕ್ಷಣ ರೈತ ತಮ್ಮ ಪಶುಗಳು ಸತ್ತು ಹೋದರೂ ಪರವಾಗಿಲ್ಲ ಎಂದುಕೊಂಡು ಔಷಧಿ ಕೊಡಿಸದೇ ಮನೆಗೆ ವಾಪಸ್ ಹೋಗುವಂತಹ ಸಂದರ್ಭಗಳು ಹೆಚ್ಚಾಗಿವೆ. ಆದುದರಿಂದ ಸರ್ಕಾರದವರು ಜಾನುವಾರುಗಳಿಗೆ ಟ್ರೀಟ್‌ಮೆಂಟ್ ಕೊಡಲು ಅಗತ್ಯವಿರುವ ಔಷಧಿಯನ್ನು ಫ್ರೀಯಾಗಿ ಕೊಡಬೇಕು ಮತ್ತು ಇದಕ್ಕಾಗಿ ಹೆಚ್ಚಿನ ಹಣವನ್ನು ಇಡಬೇಕೆಂದು ನಾನು ಮಾನ್ಯ ಸಚಿವರನ್ನು ಆಗ್ರಹಿಸುತ್ತೇನೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ :- ಮಾನ್ಯ ಅಧ್ಯಕ್ಷರೆ, ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ ಬೇಕು ಮತ್ತು ಪಶು ವೈದ್ಯರುಗಳ ಕೊರತೆ ಇದೆ ಎಂಬ ವಿಚಾರವನ್ನು ಸಾಕಷ್ಟು ಬಾರಿ ಶಾಸಕರುಗಳು ಮೇಲಿಂದ ಮೇಲೆ ಹೇಳುತ್ತಲೇ ಇದ್ದಾರೆ. ಅದರ ಜೊತೆಗೆ ಪಶು ಅಭಿವೃದ್ಧಿ ಕೂಡ ಬಹಳ ಮುಖ್ಯವಾದುದು. ನಮ್ಮಲ್ಲಿ ಇರುವಂತಹ ಅಮೃತ ಮಹಲ್ ಆಗಲೀ, ದೇವಣಿ ಆಗಲೀ, ಹಳ್ಳಿಕಾರ್ ಆಗಲೀ, ಇವೇನು ತಳಿಗಳಿವೆ, ಇವುಗಳನ್ನು ಅಭಿವೃದ್ಧಿ ಮಾಡುವುದರಿಂದ ಗ್ರಾಮೀಣ ಪ್ರದೇಶಗಳ ರೈತರ ಕುಟುಂಬಗಳಿಗೆ ಅವರು ಸ್ವಾವಲಂಬಿಯಾಗಿ ಬದುಕಲಿಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು :- ಡೈರಿ ಡೆವಲಪ್‌ಮೆಂಟ್ ಆಗುತ್ತದೆ ಎಂದು ಹೇಳಿ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ :- ಡೈರಿ ಡೆವಲಪ್‌ಮೆಂಟ್ ಮಾಡಲಿಕ್ಕೆ ಇಂತಹ ತಳಿಗಳನ್ನೆಲ್ಲಾ ನಮ್ಮಲ್ಲಿ ಅಭಿವೃದ್ಧಿ ಮಾಡಬೇಕಾಗಿದೆ. ಬಹುಶಃ ಕರ್ನಾಟಕ ರಾಜ್ಯದ ಹವಾಮಾನ ಡೈರಿ ಡೆವಲಪ್‌ಮೆಂಟ್ ಮಾಡಲಿಕ್ಕೆ ಬಹುಶಃ ರಾಷ್ಟ್ರದಲ್ಲಿಯೇ ಎಲ್ಲಾ ರಾಜ್ಯಗಳಿಗಿಂತಲೂ ಉತ್ತಮವಾದಂತಹ ಹವಾಮಾನ ಇದೆ. ನಾವು ಮೇಲಿಂದ ಮೇಲೆ ಕೇಳುತ್ತಲೇ ಇದ್ದೇವೆ. ಹಾಲಿನ ಉತ್ಪಾದನೆಯಲ್ಲಿ ಮೊದಲನೇ ಸ್ಥಾನ ತೆಗೆದುಕೊಂಡು ಬರಲಿಕ್ಕೆ ಈ ಡೈರಿಗಳು ಡೆವಲಪ್ ಆಗಬೇಕು. ಅದಕ್ಕೆ ಬೇಕಾಗುವಂತಹ ವೈದ್ಯಕೀಯ ಬೆಳವಣಿಗೆಗಳೂ ಕೂಡ ಆಗಬೇಕು. ಅದರಲ್ಲಿ ಸಂಶೋಧನೆ ಮಾಡಲಿಕ್ಕೆ ಪಶು ವಿಶ್ವವಿದ್ಯಾನಿಲಯ ಬೇಕು. ಇದನ್ನು ನಾನು ಮೇಲಿಂದ ಮೇಲೆ ಕೇಳುತ್ತಿದ್ದೇನೆ. ನಾನು ಮೂರನೇ ಬಾರಿಗೆ ಇಲ್ಲಿಗೆ ಶಾಸಕನಾಗಿ ಬಂದಿದ್ದೇನೆ. ಇದರ ಅವಶ್ಯಕತೆ ಕರ್ನಾಟಕ ರಾಜ್ಯದಲ್ಲಿ ಇದೆ. ಬೇರೆ ರಾಜ್ಯಗಳಲ್ಲಿ ಈಗಾಗಲೇ ಸ್ಥಾಪನೆಯಾಗಿರುವಂತೆ ಕರ್ನಾಟಕ ರಾಜ್ಯದಲ್ಲಿ ಪಶು ವಿಶ್ವವಿದ್ಯಾನಿಲಯ. ಯಾವಾಗ ಸ್ಥಾಪನೆ ಮಾಡುತ್ತೀರಿ ಎಂಬ ಬಗ್ಗೆ ಭರವಸೆಯನ್ನು ಕೊಡಬೇಕು. ಗ್ರಾಮೀಣ ಪ್ರದೇಶದ ರೈತ ಕುಟುಂಬಗಳ ಮಕ್ಕಳು ಸ್ವಾವಲಂಬಿಯಾಗಿ ಬದುಕಲಿಕ್ಕೆ ಇದರಿಂದ ಹೆಚ್ಚು ಅವಕಾಶವಾಗುತ್ತದೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಸನ್ಮಾನ್ಯ ಮಂತ್ರಿಗಳಲ್ಲಿ ಹೇಳುತ್ತಿದ್ದೇನೆ.

ಶ್ರೀ **ಅಧ್ಯಕ್ಷರು** :- ಒಂದು ನಿಮಿಷ, ಮಾನ್ಯ ಮಂತ್ರಿಗಳಲ್ಲಿ ನನ್ನದೊಂದು ಪ್ರಶ್ನೆ ಇದೆ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಆರಂಭಿಸಲು ಸರ್ಕಾರದವರು ಬೇಕಾದಷ್ಟು ಅನುಮತಿಗಳನ್ನು ಕೊಡುತ್ತಿದ್ದಾರೆ. ಅದೇ ರೀತಿ ಎಲ್ಲಾ ಜಿಲ್ಲೆಗಳಲ್ಲೂ ಪಶು ವೈದ್ಯ ಕಾಲೇಜುಗಳನ್ನು ತೆರೆಯಲೂ ಸಹಾ ಸರ್ಕಾರದವರು ಏಕೆ ಅನುಮತಿ ಕೊಡಬಾರದು ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಿ ನೋಡಿ. ಈ ಪ್ರಸ್ತಾವನೆಯನ್ನು ಕ್ಯಾಬಿನೆಟ್ ಮುಂದೆ ಇಡಿ. ವರ್ಷಕ್ಕೆ 5-8 ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲು ಸರ್ಕಾರದವರು ಅನುಮತಿ ನೀಡಿದಂತೆ ಇದಕ್ಕೂ ಏಕೆ ಕೊಡಬಾರದು ? ಯೂನಿವರ್ಸಿಟಿ

ಸ್ಥಾಪಿಸುವ ವಿಚಾರ ಬೇರೆ. ಪಶು ವೈದ್ಯಕೀಯ ಕಾಲೇಜುಗಳು ಹೆಚ್ಚಿಚ್ಚು ಸಂಖ್ಯೆಯಲ್ಲಿ ಆರಂಭವಾದರೆ ನಂತರ ಯೂನಿವರ್ಸಿಟಿ ತಾನಾಗೇ ಆರಂಭವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಅಧ್ಯಕ್ಷರೆ, ಈಗ fisheries college ಒಂದೇ ಒಂದು ಇದೆ. Fisheries college ಹೆಚ್ಚಿಚ್ಚು ಆದರೆ ಒಳನಾಡಿನ ಮೀನುಗಾರಿಕೆಗೆ ಹೆಚ್ಚು ಅಭಿವೃದ್ಧಿಯನ್ನು ಕೊಡಲಿಕ್ಕಾಗುತ್ತದೆ. ತಾವು ಏಕೆ ಹೆಚ್ಚು ಪಶು ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಅನುಮತಿ ಕೊಡುತ್ತಿಲ್ಲ ಎಂದು ಕೇಳಿದಿರಿ. ಪ್ರೈವೇಟ್ ಪಶು ವೈದ್ಯಕೀಯ ಕಾಲೇಜುಗಳು ಇಲ್ಲ. ಆದ್ದರಿಂದ ಅನುಮತಿ ಕೊಡಲಿಕ್ಕಾಗುತ್ತಿಲ್ಲ. ಸರ್ಕಾರದವರಿಗೆ ತೆರೆಯಲಿಕ್ಕಾಗುತ್ತಿಲ್ಲ, ಪ್ರೈವೇಟ್ ಕಾಲೇಜುಗಳಿದ್ದಲ್ಲಿ ಇನ್ನೂ ಹೆಚ್ಚು ತೆರೆಯಲು ಅನುಮತಿ ಕೊಡುತ್ತಿದ್ದರು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಅಧ್ಯಕ್ಷರು :- ನಾನು ಅದನ್ನೇ ಕೇಳುತ್ತಿದ್ದೇನೆ. ಪ್ರೈವೇಟ್‌ನವರಿಗೆ ಏಕೆ ಹೆಚ್ಚು ಕಾಲೇಜುಗಳನ್ನು ತೆರೆಯಲು ಅನುಮತಿ ನೀಡಬಾರದು ಎಂದೇ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಇದರಿಂದ ಡೈರಿ ಡೆವಲಪ್‌ಮೆಂಟ್ ಆಗುತ್ತದೆ. ಮಕ್ಕಳು ಹೆಚ್ಚು ಹೆಚ್ಚು ಹಾಲು ಕುಡಿಯಲಿಕ್ಕೆ ಅನುಕೂಲವಾಗುತ್ತದೆ. ಡೈರಿ ಪ್ರಾಡಕ್ಟ್ಸ್ ಉತ್ಪಾದನೆ ಕೂಡ ಇದರಿಂದ ಜಾಸ್ತಿಯಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ :- ರೈತರಿಗೆ ಉಪಯೋಗ ಮಾಡುವುದು ಎಂದರೆ ಏನು ? ಇಷ್ಟೇನೇ. ಸದನದಲ್ಲಿ ಇರುವಂತಹ ಸದಸ್ಯರಲ್ಲಿ ಶೇಕಡ 80 ರಷ್ಟು ಜನ ರೈತರೇ ಆಗಿದ್ದೇವೆ.

ಅಧ್ಯಕ್ಷರು :- ಮಾನ್ಯ ಸದಸ್ಯರುಗಳೆಲ್ಲಾ ಸಲಹೆ ಕೊಟ್ಟಿದ್ದೀರಿ. ತಮ್ಮ ಮಾತಿಗೆ ನಾನೂ ಕೂಡ ದ್ವನಿಗೂಡಿಸಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಏನು ಹೇಳುತ್ತಾರೆ ಎಂಬುದನ್ನು ನೋಡೋಣ. Let us see.

ಶ್ರೀ ಎಂ. ಮಹದೇವ್ :- ಸನ್ಮಾನ್ಯ ಅಧ್ಯಕ್ಷರೆ, ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯದಲ್ಲಿ ಪಶು ವೈದ್ಯಕೀಯ ಇಲಾಖೆ ಬಹಳ ಉತ್ತಮವಾದಂತಹ ಕೆಲಸವನ್ನು ಮಾಡುತ್ತಿದೆ. ಮೂಲ ಸೌಲಭ್ಯಗಳನ್ನೂ ಸಹ ನಾವು ಕೊಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರು, ಮಾನ್ಯ ಬೆಲ್ಲದ್‌ರವರು, ಮಾನ್ಯ ಜ್ಞಾನೇಂದ್ರರವರು, ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ ಏಕೆ ಸ್ಥಾಪಿಸಬಾರದು ಎಂದು ಕೇಳಿದ್ದಾರೆ. ನಮ್ಮಲ್ಲಿ ಎಷ್ಟೆಲ್ಲಾ ಅನುಕೂಲಗಳಿವೆ. ವಿಶ್ವವಿದ್ಯಾನಿಲಯ ಸ್ಥಾಪನೆಯಾದರೆ ರೈತರಿಗೆ ಅನುಕೂಲವಾಗುತ್ತದೆ, ಅನಿಮಲ್ ಹಸ್ಬೆಂಡರಿ ಇಲಾಖೆಗೆ ಬಹಳ ಒಳ್ಳೆಯ ಹೆಸರು ಬರುತ್ತದೆ, ಆದ್ದರಿಂದ ಏಕೆ ಅದನ್ನು ಸ್ಥಾಪಿಸಬಾರದು ಎಂಬ ಬಗ್ಗೆ ಸಲಹೆಗಳನ್ನು ಸರ್ಕಾರಕ್ಕೆ ನೀಡಿದ್ದೀರಿ. ಕೆಲವು ಬೇರೆ ಬೇರೆ ರಾಜ್ಯಗಳಲ್ಲೂ ಕೂಡ ಈ ವಿಶ್ವವಿದ್ಯಾನಿಲಯ ಇದೆ. ಹಿಂದೆ ಕ್ಯಾಬಿನೆಟ್ ಮುಂದೆ ಈ ವಿಚಾರ ಬಂದಿತ್ತು. ಕ್ಯಾಬಿನೆಟ್‌ನಲ್ಲಿ ಈ ವಿಚಾರವನ್ನು ಕ್ಯಾಬಿನೆಟ್ ಸಬ್ ಕಮಿಟಿಗೆ ರೆಫರ್ ಮಾಡಲಾಯಿತು. ಕ್ಯಾಬಿನೆಟ್ ಸಬ್ ಕಮಿಟಿಗೆ ಸಹಾಯಕವಾಗಿ ಒಂದು ಟೆಕ್ನಿಕಲ್ ಕಮಿಟಿ ಇದೆ. ಆ ಟೆಕ್ನಿಕಲ್ ಕಮಿಟಿಯವರಿಗೆ ಈ ಬಗ್ಗೆ ರಿಪೋರ್ಟ್ ಕೊಡಿ ಎಂದು ಕೇಳಲಾಯಿತು. ಯಾರೋ ಒಬ್ಬರು ಅದರ ಬಗ್ಗೆ ತಕರಾರು ಹಾಕಿದ್ದಾರೆ. ಆದರೂ ಸಹ ಮತ್ತೆ ಅದನ್ನು ಕ್ಯಾಬಿನೆಟ್‌ನ ಮುಂದೆ ತರಲು ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಪಶು ವೈದ್ಯ ಯೂನಿವರ್ಸಿಟಿಯೊಂದನ್ನು ತೆರೆಯಬೇಕೆಂಬ ಬಗ್ಗೆ ಸರ್ಕಾರಕ್ಕೆ ರಾಜ್ಯದ ಎಲ್ಲಾ ಕಡೆಗಳಿಂದಲೂ ಒತ್ತಾಯ ಬರುತ್ತಿದೆ. ಶಾಸಕ ಮಹನೀಯರು, ಸಾರ್ವಜನಿಕರು, ರೈತಾಪಿ ವರ್ಗದವರೆಲ್ಲರೂ ಈ ಬಗ್ಗೆ ಒತ್ತಾಯಿಸುತ್ತಿದ್ದಾರೆ. ಪಶು ವೈದ್ಯ ವಿಶ್ವವಿದ್ಯಾನಿಲಯ ತೆರೆಯುವ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಮಾನ್ಯ

ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ, ಅದನ್ನು ಕ್ಯಾಬಿನೆಟ್ ಮುಂದಿಟ್ಟು ಅದರ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನೆಲ್ಲಾ ಹೇಳಿ, ನಾವು ಅವರ ಹತ್ತಿರ ಚರ್ಚೆ ಮಾಡಿ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇವೆ.

ಶ್ರೀ ಚಂದ್ರಕಾತ್ ಜಿ. ಬೆಲ್ಲದ್ :- ಕೆಲವು ಸ್ಥಳಗಳಲ್ಲಿ ಒಂದಷ್ಟು ಪಶು ವೈದ್ಯಕೀಯ ಕಾಲೇಜುಗಳನ್ನಾದರೂ ತಾವು ಪ್ರಾರಂಭ ಮಾಡಿ.

ಶ್ರೀ ಎಂ. ಮಹದೇವ್ :- ಮಾನ್ಯ ಸದಸ್ಯರು ಬಹಳ ಉತ್ತಮವಾದತಂಹ ಸಲಹೆಗಳನ್ನು ಇವತ್ತು ಮುಕ್ತ ಮನಸ್ಸಿನಿಂದ ಕೊಟ್ಟಿದ್ದಾರೆ.

ಅಧ್ಯಕ್ಷರು :- ಮಾನ್ಯ ಸದಸ್ಯರುಗಳ ಜೊತೆಗೆ ನಾನು ಕೂಡ ಸಲಹೆ ಕೊಟ್ಟಿದ್ದೇನೆ.

ಶ್ರೀ ಎಂ. ಮಹದೇವ್ :- ಮಾನ್ಯ ಅಧ್ಯಕ್ಷರಾದಿಯಾಗಿ ಹಲವಾರು ಮಾನ್ಯ ಸದಸ್ಯರುಗಳ ಪಶು ವೈದ್ಯಕೀಯ ಕಾಲೇಜುಗಳನ್ನು ಏಕೆ ತೆರೆಯಬಾರದು ಎಂಬ ಬಗ್ಗೆ ಬಹಳ ಕಳಕಳಿಯಿಂದ ಮುಕ್ತವಾದ ಮನಸ್ಸಿನಿಂದ, ಹೃದಯಪೂರ್ವಕವಾಗಿ ತಾವು ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಅದರ ಬಗ್ಗೆ ನಾನು ಪರಿಶೀಲನೆ ಮಾಡಿ .....

ಅಧ್ಯಕ್ಷರು :- ಒಂದು ಕೆಲಸ ಮಾಡಿ. ಇದರ ಬಗ್ಗೆ ನೆಕ್ಸ್ಟ್ ಬಜೆಟ್‌ನಲ್ಲಿ ಒಂದು ಪ್ಯಾರಾ ಹಾಕುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ನಾವು ಕೇಳಿಕೊಳ್ಳುತ್ತಿದ್ದೇವೆ ಎಂದು ಹೇಳಿ.

ಶ್ರೀ ಚಂದ್ರಕಾತ್ ಜಿ. ಬೆಲ್ಲದ್ :- ಇದೀಗ ತಾನೇ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸುತ್ತಿದ್ದಾರೆ. ಅವರು ಮಾನ್ಯ ಅಧ್ಯಕ್ಷರ ಮಾತುಗಳನ್ನು ಗಮನಿಸಬಹುದು.

ಶ್ರೀ ಎಂ. ಮಹದೇವ್ :- ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡುತ್ತೇನೆ.

ಶ್ರೀ ಡಿ.ಎ. ಸದಾನಂದಗೌಡ :- ಈ ಚರ್ಚೆಯ ಸಂದರ್ಭದಲ್ಲೇ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸದನಕ್ಕೆ ಆಗಮಿಸಿದ್ದನ್ನು ಕಂಡು ನಮಗೆಲ್ಲಾ ತುಂಬಾ ಸಂತೋಷವಾಗಿದೆ. ಈಗಾಗಲೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಎಲ್ಲಾ ವಿಚಾರಗಳನ್ನು ತಿಳಿಸಿದ್ದಾರೆ. ರಾಜ್ಯದಲ್ಲಿ ಪಶು ವೈದ್ಯಕೀಯ ಕಾಲೇಜುಗಳನ್ನು ತೆರೆಯುವಂತಹ ಇರಾದೆ ಸರ್ಕಾರಕ್ಕಿದೆಯೇ ಎಂಬ ಪ್ರಶ್ನೆಯನ್ನು ನಾವು ಈಗಾಗಲೇ ಮಾನ್ಯ ಮಂತ್ರಿಗಳಿಗೆ ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಆಗ ಸದನದಲ್ಲಿ ಇರಲಿಲ್ಲ. ಅದನ್ನು ಇವತ್ತು ಮಾಡಬೇಕಾಗಿದೆ. ಇವತ್ತಿನ ದಿನಗಳಲ್ಲಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳು ಸಾಕಷ್ಟು ಸಂಖ್ಯೆಯಲ್ಲಿ ನಮ್ಮ ರಾಜ್ಯದಲ್ಲಿ ಆರಂಭವಾಗಿ ಅದರಿಂದ ಸಾಕಷ್ಟು ವಿದ್ಯಾರ್ಥಿಗಳಿಗೆ ಅವಕಾಶ ದೊರೆತಿದೆ. ಆದರೆ ಈ ಕ್ಷೇತ್ರದಲ್ಲಿ ಇನ್ನಷ್ಟು ಗಣನೀಯವಾದಂತಹ ಅಭಿವೃದ್ಧಿ ಆಗಬೇಕು. ಇವತ್ತು ಸಾಮಾನ್ಯ ರೈತ ಒಂದೆರಡು ಹಸುಗಳನ್ನು ಕಟ್ಟಿಕೊಂಡು ಅವನು ಬದುಕಬೇಕಾದರೆ, ಆ ವ್ಯವಸ್ಥೆಗೆ ಬೇಕಾದಂತಹ ಪೂರಕ ಮೂಲಭೂತ ಸೌಲಭ್ಯಗಳೂ ಕೂಡ ಸರ್ಕಾರದಿಂದ ಬರಬೇಕಾಗಿದೆ. ಈ ರೀತಿಯ ಕಾಲೇಜುಗಳು ಆರಂಭವಾದರೆ ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರೂ ಕೂಡ ಪಶು ವೈದ್ಯಕೀಯ ಕಾಲೇಜುಗಳನ್ನು ಹೆಚ್ಚಿಚ್ಚು ಸಂಖ್ಯೆಯಲ್ಲಿ ತೆರೆಯಬೇಕೆಂದು ಹೇಳಿದ್ದಾರೆ. ಸಾಕಷ್ಟು ಪಶು ವೈದ್ಯರು ಸರ್ಕಾರಕ್ಕೆ ಮತ್ತು ಹೊರಗಡೆಯೂ ಕೂಡ ಬೇಕಾಗಿದೆ. ಇದನ್ನು ಸಾಧ್ಯವಾಗಿಸಲು ಮೂಲಭೂತ ವ್ಯವಸ್ಥೆಗಳನ್ನು

ಮಾಡುವಂತಹ ಇರಾದೆ ಸರ್ಕಾರಕ್ಕಿದೆಯೇ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ತೆರೆದ ಮನಸ್ಸಿನಿಂದ ಇದಕ್ಕೆ ಒತ್ತು ಕೊಟ್ಟರೆ ರೈತಾಪಿ ವರ್ಗದ ಜನರು ಸ್ವಾಭಿಮಾನಿಗಳಾಗಿ ಸ್ವಂತಿಕೆಯಿಂದ ಬದುಕಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಪರಿಗಣನೆ ಮಾಡಬೇಕೆಂಬುದು ನಮ್ಮ ಆಗ್ರಹವಾಗಿದೆ. ಹಿಂದಿನ ಮಾನ್ಯ ಸಚಿವರು ನಮ್ಮ ಪುತ್ತೂರಿನ ಕೊಯ್ಲಾ ಕ್ಯಾಟಲ್ ಫಾರ್ಮ್‌ಗೆ ಭೇಟಿ ಕೊಟ್ಟಿದ್ದರು. ಸುಮಾರು ಒಂದು ಸಾವಿರ ಎಕರೆಗಳಷ್ಟು ಜಾಗ ಅಲ್ಲಿದೆ. ಅದರಲ್ಲಿ ಈಗಾಗಲೇ ಅವರು ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಎಲ್ಲವನ್ನೂ ಪರಿಶೀಲನೆ ಮಾಡಿದಂತಹ ಹಿಂದಿನ ಮಂತ್ರಿಗಳು, ಇಲ್ಲಿ ಒಂದು ವೈದ್ಯಕೀಯ ಕಾಲೇಜು ಸ್ಥಾಪಿಸುವುದು ಸೂಕ್ತ ಹತ್ತಿರದಲ್ಲಿ ನದಿ ಇದೆ, ಬೇಕಾದಷ್ಟು ನೀರಿನ ವ್ಯವಸ್ಥೆ ಇದೆ, ಅಲ್ಲಿ ಪ್ರಯೋಗಾಲಯಗಳನ್ನು ಮಾಡಲಿಕ್ಕೆ ಬೇಕಾದಂತಹ ವ್ಯವಸ್ಥೆಗಳಿವೆ ಎಂದು ಹೇಳಿದ್ದರು. ಈಗಿನ ಮಂತ್ರಿಗಳು ದಯವಿಟ್ಟು ಅಲ್ಲಿಗೊಮ್ಮೆ ಭೇಟಿ ಕೊಟ್ಟು. ಇದನ್ನು ನೋಡಬೇಕು. ಪುತ್ತೂರಿನ ಕೊಯ್ಲಾ ಕ್ಯಾಟಲ್ ಫಾರ್ಮ್‌ನಲ್ಲಿ ವೈದ್ಯಕೀಯ ಕಾಲೇಜೆವೊಂದನ್ನು ಸ್ಥಾಪಿಸಬೇಕು ಎನ್ನುವಂತಹ ಆಗ್ರಹವನ್ನು ನಾನು ಮಾಡುತ್ತೇನೆ. ಯಾವ ರೀತಿ ಈಗ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳು ಆರಂಭವಾಗುತ್ತಿವೆಯೋ ಅದೇ ರೀತಿ ಪಶು ವೈದ್ಯಕೀಯ ಕಾಲೇಜುಗಳನ್ನು ತೆರೆಯಲಿಕ್ಕೆ ಏಕೆ ಹಿಂದೇಟು ಹಾಕುತ್ತಿದೆ ? ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಬೇಕು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ :- ಮಾನ್ಯ ಅಧ್ಯಕ್ಷರೆ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿಗಿಂತ ಇದು ಬಹಳ ಮಹತ್ವವಾದ ವಿಚಾರವಾಗಿದೆ. ಗ್ರಾಮೀಣ ಪ್ರದೇಶದ ಮಕ್ಕಳು ಶಹರಗಳಿಗೆ ವಲಸೆ ಬರುವಂತಾದ್ದನ್ನು ತಪ್ಪಿಸಬೇಕಾದರೆ, ಈ ಒಂದು ಪಶು ವೈದ್ಯಕೀಯ ಕಾಲೇಜುಗಳು ಬಂದು, ಅದರಲ್ಲಿ ಸಂಶೋಧನೆಯಾದರೆ ಹೆಚ್ಚು ಪಶುಗಳನ್ನು ಸಾಕಲಕ್ಕೆ ಅನುಕೂಲವಾಗುತ್ತದೆ. ರೈತನಿಗೆ ಇದರಿಂದ ಆರ್ಥಿಕವಾದಂತಹ ಬೆಳವಣಿಗೆಯಾಗುತ್ತದೆ. ಗ್ರಾಮೀಣ ಪ್ರದೇಶದ ಬೆಳವಣಿಗೆಗೆ ಇದು ಬಹಳ ಮುಖ್ಯವಾಗಿದೆ. ಸಾಕಷ್ಟು ಪಶು ವೈದ್ಯರ ನೇಮಕಾತಿಗಳನ್ನು ಮಾಡಬೇಕು. ನಮ್ಮ ಹಳ್ಳಿಕಾರು, ಅಮೃತ ಮಹಲ್, ದೇವಣಿ ಇತ್ಯಾದಿ ಉತ್ತಮ ತಳಿಗಳ ಅಭಿವೃದ್ಧಿಯಾಗಬೇಕು. ಈ ತಳಿಗಳು ಬಹಳ ಉತ್ತಮವಾದ ಹಾಲನ್ನು ಕೊಡುತ್ತವೆ. ಅದರಿಂದ ನಮ್ಮ ಡೈರಿ ಡೆವಲಪ್ ಆಗುತ್ತದೆ. ರಾಜ್ಯ ರಾಷ್ಟ್ರದಲ್ಲಿಯೇ ಮೊದಲನೆಯದಾಗಲಿಕ್ಕೆ ಇದರಿಂದ ಸಾಧ್ಯವಿದೆ. ಅಂತಹ ವಾತಾವರಣ ಕರ್ನಾಟಕ ರಾಜ್ಯದಲ್ಲಿದೆ. ದಯವಿಟ್ಟು ಮಾನ್ಯ ಸದಸ್ಯರ ಬೇಡಿಕೆ ಈಡೇರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಹದೇವ್ :- ಮಾನ್ಯ ಅಧ್ಯಕ್ಷರೆ, ಹೊಸದಾಗಿ ಪಶು ವೈದ್ಯಕೀಯ ಕಾಲೇಜುಗಳನ್ನು ತೆರೆಯುವ ವಿಚಾರದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತದೆ. ಆ ಬಗ್ಗೆ ಈಗಾಲೇ ನಿಖರವಾಗಿ ಹೇಳಲಿಕ್ಕೆ ಬರುವುದಿಲ್ಲ. ನಾನು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ, ಆರ್ಥಿಕ ಇಲಾಖೆಯ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ,

ಕ್ಯಾಬಿನೆಟ್ ಮುಂದೆ ಸಹ ಇದು ಹೋಗಬೇಕಾಗುತ್ತದೆ. ಮಾನ್ಯ ಅಧ್ಯಕ್ಷರಾದಿಯಾಗಿ ಮಾನ್ಯ ಸದಸ್ಯರುಗಳು ಈ ಬಗ್ಗೆ ಸಲಹೆ ಕೊಟ್ಟಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಅಂಕೋಲ ತಾಲ್ಲೂಕು ಬೆಲೆಕೇರಿಯ ಅಳಿವೆಯಲ್ಲಿ ಲಂಗರುಕಟ್ಟೆ (ಜೆಟ್ಟಿ) ನಿರ್ಮಾಣ

146 (521) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಕೋಲಾ ತಾಲ್ಲೂಕು ಬೇಲೆಕೇರಿಯ ಅಳಿವೆಯಲ್ಲಿ ಲಂಗರುಕಟ್ಟೆ (ಜೆಟ್ಟಿ) ನಿರ್ಮಾಣ ಯೋಜನೆ ಯಾವ ಹಂತದಲ್ಲಿದೆ ?

ಆ) ಇದಕ್ಕೆ ಮಂಜೂರಾತಿ ದೊರೆತಿದ್ದು ಯಾವಾಗ ? ಎಷ್ಟು ಹಣ ಮಂಜೂರಾಗಿದೆ ?

ಇ) ಈ ಯೋಜನೆಗೆ ಕೇಂದ್ರದಿಂದ ಬಿಡುಗಡೆಯಾಗಿರುವ ಹಣವೆಷ್ಟು ? ಈ ಹಣವನ್ನು ರಾಜ್ಯ ಸರ್ಕಾರ ಸರಿಯಾಗಿ ಬಳಕೆ ಮಾಡಿಕೊಳ್ಳದಿರುವ ಸಂಗತಿ ನಿಜವೇ ?

ಈ) ಪುನಃ ಸದರಿ ಯೋಜನೆಗೆ ಹೆಚ್ಚಿನ ಮೊತ್ತದ ಹಣಕಾಸು ನೆರವು ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ?

ಉ) ವಿನಿಯೋಗ ಪತ್ರವನ್ನು ನೀಡದಿರಲು ಕಾರಣಗಳೇನು (ವಿವರ ನೀಡಿ) ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ಈ ಮೊದಲು ಮಂಜೂರಾದ ಬೇಲಿಕೇರಿ ಮೀನುಗಾರಿಕೆ ಜಟ್ಟಿಯ ವಿನ್ಯಾಸವನ್ನು ಮತ್ತು ನಿರ್ಮಾಣದ ಅಂದಾಜು ವೆಚ್ಚವನ್ನು ಪರಿಷ್ಕರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಬೇಲಿಕೇರಿ ಮೀನುಗಾರಿಕೆ ಜಟ್ಟಿಯ ಮೂಲ ಪ್ರಸ್ತಾವನೆಗೆ ಭಾರತ ಸರ್ಕಾರವು ದಿನಾಂಕ 20-8-1997 ರಲ್ಲಿ ಮತ್ತು ರಾಜ್ಯ ಸರ್ಕಾರವು ದಿನಾಂಕ 11-5-1998ರಲ್ಲಿ ಮಂಜೂರಾತಿ ನೀಡಿರುತ್ತವೆ. ರೂ. 67.40 ಲಕ್ಷ ಮಂಜೂರಾಗಿದೆ.

ಇ) ರೂ. 25.00 ಲಕ್ಷಗಳು ಸದರಿ ಯೋಜನೆಯ ಮೂಲ ವಿನ್ಯಾಸವನ್ನು ಸ್ಥಳೀಯ ಅಗತ್ಯತೆಗನುಗುಣವಾಗಿ ಬದಲಾವಣೆ ಮಾಡಿದ್ದರಿಂದ ನಿರ್ಮಾಣ ಕಾರ್ಯವು ಪ್ರಾರಂಭವಾಗದೆ ಈ ಮೊತ್ತವನ್ನು ಬಳಕೆ ಮಾಡಿಕೊಂಡಿರುವುದಿಲ್ಲ.

ಈ) ಹೌದು, ದಿನಾಂಕ 13-02-2001 ರಲ್ಲಿ ರೂ. 141.00 ಲಕ್ಷಗಳ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಉ) ಸದರಿ ಯೋಜನೆಯ ಕಾಮಗಾರಿಯು ಪ್ರಾರಂಭವಾಗದೇ ಇರುವುದರಿಂದ ವಿನಿಯೋಗಿತ ಪತ್ರವನ್ನು ನೀಡಿರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೆ, ನಮ್ಮ ಹಳ್ಳಿ ಕಡೆ "ಒಡವೆ ಇದ್ದೂ ಬಡವನಾದ, ಗಂಡನಿದ್ದೂ ವಿಧವೆಯಾದಳು" ಎಂಬ ಒಂದು ಗಾದೆ ಮಾತಿದೆ. ಸರ್ಕಾರದ ಪರಿಸ್ಥಿತಿ ಹಾಗಾಗಿದೆಯೇನೋ ಎಂದು ನನಗನಿಸುತ್ತಿದೆ. 1996-97ನೇ ಇಸವಿಯಲ್ಲಿ ನನ್ನ ಅಂಕೋಲಾ ತಾಲ್ಲೂಕಿನಲ್ಲಿ ಬೇಲೆಕೇರಿಯ ಒಂದು ಮೀನುಗಾರಿಕೆ ಬಂದರನ್ನು ಅಭಿವೃದ್ಧಿ ಪಡಿಸುವುದಕ್ಕೆ ಮಂಜೂರಾತಿ ದೊರಕಿ ಕೇಂದ್ರ ಸರ್ಕಾರ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.